ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 17/1/2021

# ಕರೋನಾ ಸಂಜೀವಿನಿ

## ವಿಶ್ವದ ಅತಿ ದೊಡ್ಡ ಕರೋನಾ ಲಸಿಕೆ ಅಭಿಯಾನಕ್ಕೆ ಪ್ರಧಾನಿ ಮೋದಿ ಚಾಲನೆ

**ದೆಹಲಿ:** ಭಾರತದಾದ್ಯಂತ ಕರೋನಾ ವೈರಸ್ ಲಸಿಕೆ ನೀಡುವ ಬೃಹತ್ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, 'ಕರೋನಾ ಲಸಿಕೆ ಬಂತೆಂದು ಕರೋನಾ ಮಾರ್ಗಸೂಚಿ ಮರೆಯಬಾರದು. ಲಸಿಕೆಯ ಎರಡೂ ಡೋಸ್‌ಗಳನ್ನು ತೆಗೆದುಕೊಳ್ಳಬಹುದು. ಇವೆರಡರ ನಡುವೆ ಒಂದು ತಿಂಗಳ ಅವಧಿಯ ಅಂತರವಿದೆ ಎಂದು ತಜ್ಞರು ತಿಳಿಸಿದ್ದಾರೆ' ಎಂದು ಪಿಎಂ ಮೋದಿ ತಿಳಿಸಿದರು.

### ಮೊದಲ ಡೋಸ್

**1,91,181**

ಮೊದಲ ದಿನ ಲಸಿಕೆ ಪಡೆದವರು

- ಮೊದಲ ಹಂತದಲ್ಲಿ 3 ಕೋಟಿ ಜನರಿಗೆ ಲಸಿಕೆ
- ಎರಡನೇ ಹಂತದಲ್ಲಿ 30 ಕೋಟಿ ಜನರಿಗೆ ಲಸಿಕೆ
- 50ಕ್ಕೂ ಹೆಚ್ಚು ದೇಶಗಳಿಂದ ಲಸಿಕೆಗೆ ಬೇಡಿಕೆ

### ಭಾವುಕರಾದ ಪ್ರಧಾನಿ



ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡುವ ವೇಳೆ, ಕರೋನಾ ವಾರಿಯರ್‌ಗಳ ತ್ಯಾಗದ ಬಗ್ಗೆ ಪ್ರಸ್ತಾಪಿಸಿ ಪ್ರಧಾನಿ ಭಾವುಕರಾದರು. ಕೆಲ ಕ್ಷಣ ಅವರಿಂದ ಮಾತೇ ಹೊರಡಲಿಲ್ಲ. ನಂತರ ಸಾವರಿಸಿಕೊಂಡು ಮಾತು ಮುಂದುವರಿಸಿದರು.

### ಪ್ರಮುಖಾಂಶಗಳು

- 'ಕೋವ್ಯಾಕ್ಸಿನ್' ಲಸಿಕೆ ಪಡೆದವರಲ್ಲಿ ಗಂಭೀರ ಅಡ್ಡ ಪರಿಣಾಮ ಉಂಟಾದರೆ ಪರಿಹಾರ ನೀಡಲಾಗುವುದು ಎಂದು ಭಾರತ್ ಬಯೋಟೆಕ್ ಘೋಷಿಸಿದೆ.
- ಲಸಿಕೆ ಕಾರ್ಯ ಸೂಕ್ತ ಸಮಯದಲ್ಲಿ ಆರಂಭವಾಗಿದೆ. ಇದರಿಂದ ಕರೋನಾ ವೈರಸ್‌ನ 2ನೇ ಅಲೆ ತಪ್ಪಿಸಬಹುದು. ರೂಪಾಂತರಿ ವೈರಸ್ ಹರಡುವಿಕೆ ತಡೆಯಬಹುದು ಎಂದ ಮೇದಾಂತ ಲಿವರ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಡಾ.ಎಸ್.ಎಸ್.ಸೋಯಿನ್.

## ಕರುನಾಡಲ್ಲೂ ವಿತರಣೆ ಆರಂಭ



ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ನಡೆದ ಲಸಿಕೆ ವಿತರಣಾ ಕಾರ್ಯಕ್ರಮದಲ್ಲಿ ವಿಕ್ಟೋರಿಯಾ ಆಸ್ಪತ್ರೆ ಸ್ವಚ್ಛತಾ ಸಿಬ್ಬಂದಿ ಕೆ.ನಾಗರತ್ನ ಅವರಿಗೆ ಲಸಿಕೆ ನೀಡಲಾಯಿತು.

**ಬೆಂಗಳೂರು:** ಫ್ರಂಟ್‌ಲೈನ್ ವಾರಿಯರ್‌ಗಳಿಗೆ ಕರೋನಾ ಲಸಿಕೆ ನೀಡುವ ಅಭಿಯಾನ ರಾಜ್ಯದಲ್ಲೂ ಶುರುವಾಗಿದೆ.

ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ನಡೆದ ಲಸಿಕೆ ವಿತರಣಾ ಕಾರ್ಯಕ್ರಮಕ್ಕೆ ಸಿಎಂ ಯಡಿಯೂರಪ್ಪ ಚಾಲನೆ ನೀಡಿದರು. ವಿಕ್ಟೋರಿಯಾ ಆಸ್ಪತ್ರೆ ಸ್ವಚ್ಛತಾ ಸಿಬ್ಬಂದಿ ಕೆ.ನಾಗರತ್ನ (28 ವರ್ಷ) ಅವರಿಗೆ ಮೊದಲ ಲಸಿಕೆ ನೀಡಲಾಯಿತು. ಇದರೊಂದಿಗೆ ರಾಜ್ಯಾದ್ಯಂತ ಲಸಿಕೆ ವಿತರಣೆ ಕಾರ್ಯ ಅಧಿಕೃತವಾಗಿ ಚಾಲನೆ ಪಡೆಯಿತು. ಮಲ್ಲಸಂದ್ರದ ಸರಕಾರಿ ಆಸ್ಪತ್ರೆ ವೈದ್ಯ ಡಾ. ಕೋಮಲಾ ಲಸಿಕೆ ಪಡೆದಿರುವ 2ನೇ ವ್ಯಕ್ತಿಯಾಗಿದ್ದರೆ, ಮೂರನೆಯದ್ದಾಗಿ ವಿಕ್ಟೋರಿಯಾದ ನರ್ಸ್‌ವೊಬ್ಬರಿಗೆ ನೀಡಲಾಗಿದೆ.

**ಲಸಿಕೆ ವಿತರಣೆ**

243 ಕೇಂದ್ರ

21,658 ನೋಂದಣಿ

13,408 ಲಸಿಕೆ ವಿತರಣೆ

**ಅತಿ ಹೆಚ್ಚು**

ಕೊಡಗು- ಶೇ.84

**ಅತಿ ಕಡಿಮೆ**

ದಕ್ಷಿಣ ಕನ್ನಡ- ಶೇ. 37